ಪ್ರಪೋಸಲ್ ಬಂದ ಕೂಡಲೆ ಅಂದರೆ 15 ದಿವಸದ ಒಳಗಾಗಿ ಮಾಡುತ್ತೇವೆ. ಹಾಗೆಯೇ ರೇಡಿಯೋ ಶಾಪಿಂಗ್ ಕಾಂಪ್ಲೆಕ್ಸ್ ಬಗ್ಗೆ ಹೇಳಿದ್ದು ಅದರ ಬಗ್ಗೆ ಈಗಾಗಲೇ ಮಾನ್ಯ ಸದಸ್ಯರ ಜೊತೆ ಮಾತನಾಡಿದ್ದೇನೆ. ಅದನ್ನು ಕೂಡ 15 ದಿವಸದ ಒಳಗಾಗಿ ಅಪ್ರೂವ್ ಮಾಡಿಕೊಡುತ್ತೇವೆ.

(ಖ) ಜನವಾಹಿನಿ ಪತ್ರಿಕೆಯಲ್ಲಿ ಶಾಸಕರ ಭವನದ ಬಗ್ಗೆ ಬರೆದಿರುವುದು.

ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ) ಕ್ಷೇತ್ರ) ಮಾನ್ಯ ಅಧ್ಯಕ್ಷರೆ, ಇವತ್ತು ಜನವಾಹಿನಿ ಪತ್ರಿಕೆಯಲ್ಲಿ ಬಂದಂಥ ಒಂದು ನ್ಯೂಸ್ ಕಾಲಂನ್ನು ತಮ್ಮಗಮನಕ್ಕೆ ತರಬಯಸುತ್ತೇನೆ. ಆ ಪತ್ರಿಕೆಯವರು ಶಾಸಕರ ಭವನದ ಬಗ್ಗೆ ಬಹಳ ಗಂಭೀರವಾಗಿ ಬರೆದಿದ್ದಾರೆ. ಅವರು ದಿವಸದಿಂದ ದಿವಸಕ್ಕೆ ನಮ್ಮ ಬಗ್ಗೆ ಹೀಗೆ ಬರೆಯುತ್ತಾ ಹೋದರೆ ಸಾರ್ವಜನಿಕರ ದೃಷ್ಟಿಯಲ್ಲಿ ನಾವು ಕೇವಲ ಮೋಜು ಮಾಡಲಿಕ್ಕಾಗಿ ಬೆಂಗಳೂರಿಗೆ ಬರುತ್ತಿದ್ದೇವೆ ಎನ್ನುವ ಭಾವನೆ ಬರುವ ರೀತಿಯಲ್ಲಿ ನಮ್ಮ ಪತ್ರಿಕಾ ಗೆಳೆಯರು ಬರೆಯುತ್ತಾ ಹೋದರೆ ಬಹುಶಃ ನಮ್ಮ ಸ್ಥಿತಿ ಏನಾಗುತ್ತೋ ಗೊತ್ತಿಲ್ಲ. ಶಾಸಕರ ಭವನದಲ್ಲಿ ಅವ್ಯವಹಾರ ಕೂಡ ಆಗಿದೆ ಎಂದು ಅವರು ಹೇಳಿದ್ದಾರೆ. ನಂತರ ಇವರಿಗೆ ಹೆಲ್ತ್ ಕ್ಲಬ್ ಬೇಕೇ? ಬೆಳಿಗ್ಗೆ ವಾಕ್ ಹೋದರೆ ಬೊಜ್ಜು ಕರಗಿಸಬಹುದು. ಎನ್ನುವ ಮಟ್ಟಕ್ಕೆ ಬರೆಯುವುದು ಇದು ಸಭೆಗೆ ಘನತೆ ತರುತ್ತದೆಯೇ ಇಲ್ಲವೇ ಎಂದು ಕೇಳಲಿಕ್ಕೆ ಬಯಸುತ್ತೇನೆ. ಶಾಸಕರ ಭವನ ತಮ್ಮ ಆಡಳಿತ ವ್ಯಾಪ್ತಿಗೆ ಬರುವುದರಿಂದ ಇದನ್ನು ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡಬೇಕೆಂದು ಕೇಳಲಿಲ್ಲ. ತಾವು ಏನಾದರೂ ಅವಕಾಶ ಕೊಟ್ಟರೆ ಇದನ್ನು ಬೇರೆ ರೀತಿಯಲ್ಲಿ ಕೇಳಬೇಕೆಂದು ಇದ್ದೆ. ಇದಕ್ಕೆ ನಿಮ್ಮ ಮಾರ್ಗದರ್ಶನ ಬೇಕು. ಇಂಥದಕ್ಕೆ ಎಲ್ಲಾದರೂ ಒಂದು ಕಡೆ ನಾವು ಉತ್ತರ ಹೇಳಬೇಕಾಗುತ್ತದೆ. ನಾವೆಲ್ಲ ವಿಲನ್ ತರಹ ಕಾಣುವ ಹಾಗೆ ಬರೆದರೆ ಹೇಗೆ? ನಾವು ಮನೆ ಕೆಲಸವನ್ನು ಬಿಟ್ಟು, ನಮಗೆ ಬರಬೇಕಾದ ಆದಾಯಗಳನ್ನು ಬಿಟ್ಟು, ಒಬ್ಬಿಬ್ಬರು ಶ್ರೀಮಂತರು ಇರಬಹುದು, ಈ ರೀತಿ ಬರೆದರೆ ನಮ್ಮ ಮನಸ್ಸಿಗೆ ಬಹಳ ನೋವಾಗುತ್ತದೆ. 'ಫೈವ್ ಸ್ಟಾರ್ ಹೋಟೆಲಿಗೆ ಕಡಿಮೆ ಇಲ್ಲದಂತೆ ಶಾಸಕರ ಭವನವನ್ನು ಕೊಡಲಾಗಿದೆ, ಇಡೀ ಏರಿಯಾವನ್ನು ಪ್ಯೂರಿಫೈ ಮಾಡುವಂಥ ಪ್ಯೂರಿಫೈಯರ್ಸ್ ಹಾಕಿದ್ದೀರಿ, ಶಾಸಕರ ಭವನಕ್ಕೆ ಕಬ್ಬನ್ ಪಾರ್ಕಿನಿಂದ ನೇರವಾಗಿ ಆಕ್ಸಿಜನ್ ಬರುತ್ತದೆ. ಒಂದು ಸ್ಟೀಲ್ ಅಲ್ಯೂಮಿನಿಯಂ ಬೀಡಿಂಗ್ ಹಾಕಿ 10 ಸಾವಿರ ರೂಪಾಯಿಗಳನ್ನು ಖರ್ಚು ಮಾಡಿ ಮೋಜು ಮಾಡುತ್ತಾರೆ' ಇಂಥವುಗಳನ್ನು ಬರೆದುಕೊಂಡು ಹೋದರೆ ನಮ್ಮ ಸ್ಥಿತಿ ಏನು? ತಾವು ನಮ್ಮ ರಕ್ಷಣೆಗೆ ಬರಬೇಕು. ಬಹುಶಃ ಇದಕ್ಕೆ ಸರ್ಕಾರದಿಂದ ನಾವು ಉತ್ತರವನ್ನು ನಿರೀಕ್ಷೆ ಮಾಡುವುದಕ್ಕೆ ಆಗುವುದಿಲ್ಲವೆಂದು ನನ್ನ ಭಾವನೆ. ಇದರ ಬಗ್ಗೆ ಯಾವುದಾದರೂ ಒಂದು ದಿವಸ ಸದನದಲ್ಲಿ ಮಾತನಾಡುವುದಕ್ಕೆ ಅವಕಾಶ ಕೊಡುತ್ತೀರಾ?

ಅಧ್ಯಕ್ಷರು :— ನಾನೂ ಸಹ ಈ ಪತ್ರಿಕೆಯಲ್ಲಿ ಬಂದ ವರದಿಯನ್ನು ಓದಿದೆ. ನಮ್ಮ ಆಫೀಸಿನಿಂದ ಅದಕ್ಕೆ ರಿಪ್ಲೈ ಕಳುಹಿಸುತ್ತೇವೆ. ತಪ್ಪು ತಿಳುವಳಿಕೆಯಿಂದ ಬರೆದಿದ್ದರೆ

ವಾಸ್ತವಾಂಶ ಏನು ಇದೆ ಅದನ್ನು ಬರೆದು ಪ್ರಕಟಣೆ ಮಾಡಿ ಎಂದು ಅವರಿಗೆ ಹೇಳುತ್ತೇವೆ. ಅವರು ಪ್ರಕಟಣೆ ಮಾಡದೇ ಹೋದರೆ ಏನು ಮಾಡಬೇಕೆಂದು ನಂತರ ನಿರ್ಧರಿಸಬಹುದು.

(ಗ) ಕೇಂದ್ರ ಸರ್ಕಾರ ರೇಷ್ಮೆ ಆಮದು ನೀತಿಯಿಂದ ರಾಜ್ಯದ ಕೃಷಿಯ ಮೇಲೆ ಬೀರಿರುವ ಪರಿಣಾಮ.

+ ಶ್ರೀ ಎಸ್.ಪಿ. ಮುದ್ದಹನುಮೇಗೌಡ (ಕುಣಿಗಲ್) :— ಮಾನ್ಯ ಅಧ್ಯಕ್ಷರೆ, ಇತ್ತೀಚಿನ ಕೇಂದ್ರ ಸರ್ಕಾರದ ರೇಷ್ಮೆ ಆಮದು ನೀತಿಯಿಂದ ಈಗಾಗಲೇ ನಮ್ಮ ರಾಜ್ಯದ ಕೃಷಿಯ ಮೇಲೆ ಸಾಕಷ್ಟು ಪರಿಣಾಮವನ್ನು ಬೀರಿದೆ ಎನ್ನುವುದು ನಿರ್ವಿವಾದ ಸಂಗತಿ. ಮಾನ್ಯ ರಾಜ್ಯಪಾಲರು ತಮ್ಮ ಭಾಷಣದಲ್ಲಿ ಒಂದು ಮಾತನ್ನು ಹೇಳಿದ್ದಾರೆ. `The recent development of entry of international silk into Indian market has posed a serious challenge to the sericulture industry as never before. Indeed it poses a threat to the survival of sericulture. My Government, therefore, urges the Government of India to consider withdrawal of the notification permitting import of silk '. ಈಗ ಕೇಂದ್ರ ಸರ್ಕಾರದ ರೇಷ್ಮೆ ಆಮದು ನೀತಿ ಏನು ಬಂದಿದೆ, ಅದು ಬಂದಾದ ನಂತರದ ಪರಿಸ್ಥಿತಿಯನ್ನು ಗಮನಿಸಿದಾಗ ಇಲ್ಲಿಯ ರೇಷ್ಮೆ ಕೃಷಿಯ ಮೇಲೆ ತೀವ್ರತರವಾದಂಥ ಪರಿಣಾಮ ಆಗಿದೆ ಇದನ್ನು ಮಾನ್ಯ ರೇಷ್ಮೆ ರಾಜ್ಯ ಸಚಿವರು ಕೂಡ ಒಪ್ಪಿಕೊಳ್ಳುತ್ತಾರೆ. ಮಾನ್ಯ ಸಚಿವರು ಮೊನ್ನೆ ತುಮಕೂರಿನಲ್ಲಿ ಮಾಡಿರತಕ್ಕಂಥ ಹೇಳಿಕೆಯನ್ನು ನೋಡಿದಾಗ ಬಹುಶಃ ಈಗಲೇ ನಮ್ಮ ರೇಷ್ಮೆ ಬೆಳೆಗಾರರಿಗೆ ಸಾಕಷ್ಟು ಬಿಸಿ ಮುಟ್ಟಿದೆ ಎನ್ನುವುದು ಅವರ ಹೇಳಿಕೆಯಿಂದ ಗೊತ್ತಾಗುತ್ತದೆ. ಮತ್ತು 'ಇವತ್ತು ರೇಷ್ಮೆ ಬೆಳೆಯತಕ್ಕಂಥ ಪ್ರದೇಶದಲ್ಲಿರತಕ್ಕಂಥ ಶಾಸಕರ ಸಭೆಯನ್ನು ಕರೆದು ಕೇಂದ್ರ ಸರ್ಕಾರದ ಆಮದು ನೀತಿಯನ್ನು ವಾಪಾಸ್ಸು ತೆಗೆದುಕೊಳ್ಳಬೇಕು ಎನ್ನುವ ಒತ್ತಾಯ ಸರ್ಕಾರದಿಂದ ತರುತ್ತೇವೆ' ಎಂದು ಮಾನ್ಯ ರಾಜ್ಯಪಾಲರ ಭಾಷಣ ಮೂಲಕ ಹೇಳಿಕೆಯನ್ನು ಕೊಟ್ಟಿದ್ದೀರಿ, ಇದನ್ನು ಹೇಳಿದ ಮೇಲೆ ಸರ್ಕಾರದಿಂದ ಕೈಗೊಂಡಿರುವ ಕ್ರಮ ಏನು? ಮತ್ತು 'ನಾನು ರೇಷ್ಮೆ ಬೆಳೆ ಬೆಳೆಯತಕ್ಕಂಥ ಪ್ರದೇಶದಲ್ಲಿನ ಶಾಸಕರ ಸಭೆಯನ್ನು ಕರೆಯುತ್ತೇನೆಂದು' ಮಾನ್ಯ ಮುಖ್ಯಮಂತ್ರಿಗಳು ಹೇಳಿಕೆಯನ್ನು ಕೊಟ್ಟಿದ್ದು ಆ ಸಭೆಯನ್ನು ಕರೆಯುವುದಕ್ಕೆ ಏನಾದರೂ ಕ್ರಮ ಕೈಗೊಳ್ಳಲಾಗಿದೆಯೇ? ಮಾನ್ಯ ರಾಜ್ಯಪಾಲರ ಭಾಷಣದ ಮುಖಾಂತರ ಹೇಳಿದಂತೆ ಅದರ ಬಗ್ಗೆ ಏನು ಕಾರ್ಯಕ್ರಮ ಹಾಕಿಕೊಳ್ಳಲಾಗಿದೆ? ಈ ಒಂದು ನೀತಿಯನ್ನು ವಾಪಾಸ್ಸು ತೆಗೆದುಕೊಳ್ಳುವ ದಿಶೆಯಲ್ಲಿ ತಮಗೆ ಏನಾದರೂ ಭರವಸೆ ಇದೆಯೇ? ಕೇಂದ್ರ ಸರ್ಕಾರದ ವಾಣಿಜ್ಯ ಸಚಿವರು ರಾಜಕೀಯ, ವೈಯಕ್ತಿಕ ಪ್ರತಿಷ್ಠೆಯನ್ನು ಮಾಡಿಕೊಂಡು ಕೆಲವರ ಮೇಲೆ ಯುದ್ಧೋನ್ಮಾದರಾಜ್ಯದ ರೇಷ್ಮೆ ಬೆಳೆಗಾರರನ್ನು ಪಣವಾಗಿ ಇಟ್ಟುಕೊಂಡಿದ್ದಾರೆ. ಇದು ಸರಿಯಲ್ಲ. ಆದ್ದರಿಂದ ತಕ್ಷಣ ಸೂಕ್ತ ಕ್ರಮ ಕೈಗೊಂಡು ಈ ರೇಷ್ಮೆ ಆಮದು